

ಒಂದೇ ಕಾನೂನು ಇತ್ತು. 'ಐಪಿಸಿ'ಯ ಸೆ. 498 ಎ. ಈ ಕಾನೂನಿನಲ್ಲಿ ಗಂಡ ಅಥವಾ ಗಂಡನ ಮನೆಯವರು ವರದಕ್ಷಿಣೆ ಅಥವಾ ಇನ್ನಾವುದೇ ಕಾರಣಕ್ಕೆ ಹಿಂಸಿಸಿದರೆ ಅದು ಅಪರಾಧ, ಶಿಕ್ಷಾರ್ಹ. ಆದರೆ ಹಿಂಸೆಗೊಳಗಾದ ಹೆಣ್ಣುಮಗಳು ಪೊಲೀಸ್ ದೂರು ಕೊಟ್ಟು, ಎಫ್‌ಐಆರ್ ದಾಖಲಿಸಬೇಕು. ಅದು ಪೊಲೀಸ್ ತನಿಖೆಯ ನಂತರ ಕೋರ್ಟಿನಲ್ಲಿ ಪ್ರಕರಣವಾಗಿ ದಾಖಲಾಗುವುದು.

ನಮ್ಮ ಪರಿಚಯಸ್ಥರಲ್ಲೇ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಒಬ್ಬ ಹೆಣ್ಣುಮಗಳ ಉದಾಹರಣೆಯನ್ನು ತೆಗೆದುಕೊಂಡು ನಾವು ನೋಡಿದಾಗ ನಮ್ಮ ಅರಿವಿಗೆ ಬರುವ ವಿಷಯ – ಸಂಸಾರ ಉಳಿಸುವುದಕ್ಕೆಂದೋ, ಹೀಗೆ ಪೊಲೀಸ್ ದೂರು ದಾಖಲಿಸಬಹುದೆಂಬ ಮಾಹಿತಿ ಇಲ್ಲದೆಯೋ, ತಂದೆತಾಯಿಯರ ಸಲಹೆ ಮೇರೆಗೋ, ಹೋಗಲು ಬೇರೆ ಸುರಕ್ಷಿತ ಜಾಗವಿಲ್ಲದೆಯೋ, ಜನ ಏನು ಹೇಳಿಯಾರು ಎಂಬ ಆತಂಕಕ್ಕೋ, ಮಕ್ಕಳನ್ನು ನೋಡಿಕೊಳ್ಳುವುದು ಹೇಗೆ ಎಂಬ ಕಾಳಜಿಗೋ – ಹೀಗೆ ಯಾವುದೋ ಕಾರಣಕ್ಕೆ ಅಂಜಿ ಪೊಲೀಸ್ ದೂರು ಕೊಡುವುದೇ ಇಲ್ಲ. ಕೊಡಲು ಹೋದರೂ ಪೊಲೀಸರು ಕೇಳುವ ಪ್ರಶ್ನೆ, ಮಾಡುವ ತನಿಖೆ, ಕೋರ್ಟಿನಲ್ಲಿ ಪ್ರಕರಣ ತೆಗೆದುಕೊಳ್ಳುವ ಸಮಯ ಇವೆಲ್ಲವಕ್ಕೆ ಅಂಜಿ ದೂರು ಹಿಂಪಡೆಯುವ ಉದಾಹರಣೆಗಳೂ ಸಾಕಷ್ಟಿವೆ.

## ದುರುಪಯೋಗದ ಆರೋಪ

ಇಂಥಾ ಗಂಭೀರ ಪರಿಸ್ಥಿತಿ ಇರುವಾಗಲೂ ಸಮಾಜದ ಅನೇಕರಲ್ಲಿ ಇರುವ ಜನಪ್ರಿಯ ತಪ್ಪುಕಲ್ಪನೆ ಏನೆಂದರೆ, ಹೆಂಗಸರು ಈ ಕಾನೂನಿನ ದುರುಪಯೋಗ ಪಡೆದುಕೊಳ್ಳುತ್ತಾರೆ ಎನ್ನುವುದು. ಇರಬಹುದು; ಸುಳ್ಳು ದೂರುಗಳೂ ಇರುತ್ತವೆ. ಕುಟುಂಬ, ಸಮಾಜ, ವ್ಯವಸ್ಥೆ ಎಲ್ಲವೂ ಮಹಿಳೆಯ ವ್ಯಕ್ತಿ ಸ್ವಾತಂತ್ರ್ಯ, ಗೌರವಗಳನ್ನು ಗೌಣ ಮಾಡಿ ನೋಡುವ ಸಂದರ್ಭದಲ್ಲಿ ಒಂದಷ್ಟು ಜನ ಹೆಂಗಸರು, ಲಭ್ಯವಿರುವ ಒಂದೇ ಸಾಧನವನ್ನು ಅತಿಯಾಗಿ ಬಳಸಿಕೊಂಡಿರಬಹುದು. ದುರುಪಯೋಗಪಡಿಸಿಕೊಳ್ಳುತ್ತಾರೆ ಕೂಡಾ

ಹಾಗೆಂದ ಮಾತ್ರಕ್ಕೆ ಕಾನೂನೇ ಕೆಟ್ಟದ್ದಾಗುವುದಿಲ್ಲ. ತನ್ನ ಮೇಲಾಗುವ ದೌರ್ಜನ್ಯವನ್ನು, ಹಿಂಸೆಯನ್ನು ಮಹಿಳೆ ಪ್ರಶ್ನಿಸುವ ಸಾಧನಗಳು ಹೆಚ್ಚಾದರೆ, ಆಕೆಗೆ ಅವಳ ಜೀವನ ರೂಪಿಸುವ ಅವಕಾಶಗಳು ಇದ್ದರೆ, ಇದು ತನ್ನ ಮೇಲಾಗುತ್ತಿರುವ ಅನ್ಯಾಯ, ಇದನ್ನು ನಾನು ಅನುಭವಿಸಿಕೊಂಡು ಇರಬೇಕಿಲ್ಲ ಎಂಬ ಅರಿವು, ಧೈರ್ಯ ಆಕೆಗೆ ಬಂದರೆ, ಆಕೆಯ ಕುಟುಂಬ ಅವಳ ಪರವಾಗಿ ನಿಂತರೆ, ಕಾನೂನಿನ ಉದ್ದೇಶವೂ ಪೂರೈಸುತ್ತದೆ, ಕಾನೂನಿನ ದುರುಪಯೋಗವೂ ಕಡಿಮೆಯಾಗುತ್ತದೆ.

'ಮಹಿಳೆಯರಿಗೆ ಏನಾಗಿದೆ, ಚೆನ್ನಾಗಿಯೇ ಇದ್ದಾರಲ್ಲ!', 'ಈಗ ಮೊದಲಿನಂತಲ್ಲ, ಮಹಿಳೆಯರೂ ಶಿಕ್ಷಿತರಾಗಿದ್ದಾರೆ, ಉದ್ಯೋಗಗಳಿಗೆ ಹೋಗುತ್ತಾರೆ, ಎಲ್ಲಾ ರಂಗಗಳಲ್ಲೂ ಇದ್ದಾರೆ', 'ಹೆಂಗಸರದ್ದೇ ಸಾಮ್ರಾಜ್ಯ' ಎಂದೆಲ್ಲಾ ಹೇಳುವವರು ತಿಳಿದುಕೊಳ್ಳಬೇಕಾದ ಸತ್ಯಾಂಶ ಏನೆಂದರೆ, 2018ರ ಸಮೀಕ್ಷೆಯ ಪ್ರಕಾರ ಕೇವಲ ಶೇ 78 ಮಹಿಳೆಯರು ಮಾತ್ರ ಉದ್ಯೋಗಗಳಲ್ಲಿ ಇದ್ದರು. ನಗರಗಳಲ್ಲಿ ಐಟಿಯಂಥ ಉದ್ಯೋಗ ವಲಯಗಳಲ್ಲೂ ಕೇವಲ ಶೇ 30 ಮಹಿಳೆಯರಷ್ಟೇ ಇದ್ದಾರೆ. ಕಳೆದ ದಶಕದಿಂದಷ್ಟೇ ಕೆಲವು ಕಂಪನಿಗಳ ಉನ್ನತ ಹುದ್ದೆಗಳಲ್ಲಿ ಒಬ್ಬರೋ ಇಬ್ಬರೋ ಮಹಿಳೆಯರನ್ನು ಕಾಣುತ್ತಿದ್ದೇವೆ.

ವೈಯಕ್ತಿಕ ವಿಷಯಗಳಲ್ಲಿ, ಈಗಲೂ ಶೇ 35 ಮಹಿಳೆಯರು ಕೌಟುಂಬಿಕ ದೈಹಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ, 2010ರಲ್ಲಿ 8,391 ಮಹಿಳೆಯರು ವರದಕ್ಷಿಣೆ ಸಾವಿಗೆ ಬಲಿಯಾಗಿದ್ದಾರೆ. ಇವೆಲ್ಲ ದೈಹಿಕ, ಲೈಂಗಿಕ ಹಿಂಸೆಯ ಅಂಕಿಸಂಖ್ಯೆಗಳಾದರೆ, ಕುಟುಂಬದ ಒಳಗೆಯೇ ಮಹಿಳೆ ಒಳಗಾಗುವ ಸೂಕ್ಷ್ಮ, ಸೂಚಿತ ಹಿಂಸೆಗಳು, ನಿಯಂತ್ರಣಗಳು ಹಲವು. ಇವು ಮೌಖಿಕ, ಮಾನಸಿಕ ಹಿಂಸೆಗಳಿರುತ್ತವೆ, ಹಣಕಾಸಿಗೆ ಸಂಬಂಧಿಸಿದ ದೌರ್ಜನ್ಯಗಳೂ ಇರುತ್ತವೆ. ಎಲ್ಲಾ ರೀತಿಯ ದೌರ್ಜನ್ಯ, ಹಿಂಸೆಗಳನ್ನು ಪರಿಗಣಿಸಿದರೆ, ಶೇ 70 ಮಹಿಳೆಯರು ಒಂದಲ್ಲ ಒಂದು ರೀತಿಯ ಕೌಟುಂಬಿಕ ಹಿಂಸೆಗೆ ಈಗಲೂ ಬಲಿಯಾಗುತ್ತಿದ್ದಾರೆ.



**ಶೇ 70 ಮಹಿಳೆಯರು ಒಂದಲ್ಲ ಒಂದು ರೀತಿಯ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಶೇ 38 ಗಂಡಸರು ತಮ್ಮ ಸಂಗಾತಿಯನ್ನು ದೈಹಿಕವಾಗಿ ಹಿಂಸೆಗೆ ಒಳಪಡಿಸಿದ್ದಾಗಿ ಹೇಳಿಕೊಂಡಿದ್ದಾರೆ.**

